# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಶುಕ್ರವಾರ, ೦೮, ಮೇ, ೨೦೨೬ (ವೈಶಾಖ, ೧೮, ಶಕವರ್ಷ, ೧೯೪೮)<br>BENGALURU, FRIDAY, 08, MAY, 2026 ( VAISHAKHA , 18, SHAKAVARSHA, 1948) | ನಂ. ೩೬೦<br>No. 360 |
|---|---|---|


## ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 15 ಪಿಇಎಸ್ 2026

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ,
ಡಾ.ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:೦8.05.2026.

## ಅಧಿಸೂಚನೆ

ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ಅನ್ನು ಮತ್ತಷ್ಟು ತಿದ್ದುಪಡಿ ಮಾಡುವ ಕರಡನ್ನು, ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅಧಿಸೂಚನೆ ಸಂಖ್ಯೆ: ಆಇ 15 ಪಿಇಎಸ್ 2026 ರ ದಿನಾಂಕ: 29.04.2026 ನ್ನು ಕರ್ನಾಟಕ ರಾಜ್ಯ ಪತ್ರ ಭಾಗ-IV ಎ ಸಂಖ್ಯೆ: 343, ದಿನಾಂಕ: 29.04.2026 ರಲ್ಲಿ ಅವುಗಳನ್ನು ಪ್ರಕಟಿಸಿದ ಏಳು ದಿನಗಳೊಳಗಾಗಿ, ಇದರಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸಿರುವುದರಿಂದ.

ಮತ್ತು, ಸದರಿ ರಾಜ್ಯ ಪತ್ರವನ್ನು ದಿನಾಂಕ: 29.04.2026 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು, ಸದರಿ ಕರಡಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಆಕ್ಷೇಪಣೆಗಳನ್ನು ಮತ್ತು ಸಲಹೆಗಳನ್ನು ಸ್ವೀಕರಿಸಿಲ್ಲದಿರುವುದರಿಂದ.

ಈಗ, ಆದ್ದರಿಂದ, ಕರ್ನಾಟಕ ಅಬಕಾರಿ ಅಧಿನಿಯಮ, 1965 (1966 ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ರ 71 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು, ಈ ಮೂಲಕ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-.

## ನಿಯಮಗಳು

**1.** ಶೀರ್ಷಿಕೆ ಮತ್ತು ಪ್ರಾರಂಭ :- (1) ಈ ನಿಯಮಗಳನ್ನು ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು)(ತಿದ್ದುಪಡಿ) ನಿಯಮಗಳು, 2026 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು, ಅವುಗಳನ್ನು ಅಂತಿಮವಾಗಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. 1-ಎ ನೇ ನಿಯಮದ ತಿದ್ದುಪಡಿ**:- ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳು, 1968 ರಲ್ಲಿ (ಇದರಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), ನಿಯಮ 1-ಎ ರಲ್ಲಿ, ಖಂಡ (ಸಿ) ರ ತರುವಾಯ, ಈ ಮುಂದಿನದನ್ನು ಖಂಡವನ್ನು ಸೇರಿಸತಕ್ಕದ್ದು**,** ಎಂದರೆ:-

**"(ಎಎ) "ಅಬಕಾರಿ ನೋಂದಣಿ ದಾಖಲೆ"** ಎಂದರೆ ಕರ್ನಾಟಕ ಅಬಕಾರಿ ಕಾಯ್ದೆ, 1965 ರ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಮತ್ತು ಅಧಿಸೂಚನೆಗಳು, ಆದೇಶಗಳು ಅಥವಾ ಸುತ್ತೋಲೆಗಳನ್ನು ಅನುಷ್ಠಾನಗೊಳಿಸುವ ಉದ್ದೇಶಕ್ಕಾಗಿ ಅಬಕಾರಿ ಇಲಾಖೆಯಿಂದ ನಿರ್ವಹಿಸಲ್ಪಡುವ ಎಲೆಕ್ಟ್ರಾನಿಕ್ ದತ್ತ ಸಂಚಯ**".**

**3. 2-ಎಇ ನೇ ನಿಯಮದ ತಿದ್ದುಪಡಿ**:- ಸದರಿ ನಿಯಮಗಳ ನಿಯಮ **2-**ಎಇ ರಲ್ಲಿ:-

**(i)** ಉಪ-ನಿಯಮ (**1**) ರ ಬದಲಾಗಿ ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು**,** ಎಂದರೆ:-

**"2-ಎಇ. ಬೆಲೆಯ ಘೋಷಣೆ:-** (1) ಡಿಸ್ಟಿಲರಿ ಸನ್ನದುದಾರನು ಅಥವಾ ಬ್ರೀವರಿ ಸನ್ನದುದಾರನು ಅಥವಾ ಕ್ರಾಫ್ಟ್ ಬ್ರೀವರಿ ಸನ್ನದುದಾರನು ಅಥವಾ ವೈನರಿ ಸನ್ನದುದಾರನು ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನು ಅಥವಾ ಮಿಲಿಟರಿ ಕ್ಯಾಂಟೀನ್ ಮಳಿಗೆ ಬಂಧಪತ್ರಾಧೀನ ಉಗ್ರಾಣ ಸನ್ನದನ್ನು ಹೊಂದಿರುವ ಸನ್ನದುದಾರನು**,** ಸಂದರ್ಭಾನುಸಾರ**,** ಅಬಕಾರಿ ಸುಂಕ ಅಥವಾ ಪ್ರತಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ ಅಥವಾ ಹೆಚ್ಚುವರಿ ಪ್ರತಿ ಸುಂಕವನ್ನು**,** ಭಾರತದ ಹೊರಗಿನಿಂದ ಆಮದು ಮಾಡಿಕೊಳ್ಳುವ ಮದ್ಯದ ಮೇಲೆ ವಿಶೇಷ ಶುಲ್ಕ ವಿಧಿಸುವ ಉದ್ದೇಶಕ್ಕಾಗಿ**,** ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ ಡಿಪಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾರಾಟ ಮಾಡಲು ಅಥವಾ ಕರ್ನಾಟಕ ರಾಜ್ಯದ ಹೊರಗೆ ಆದರೆ ಭಾರತದ ಒಳಗೆ ರಫ್ತು ಮಾಡಲು ಉದ್ದೇಶಿಸಲಾದ ಮದ್ಯದ ಬ್ರ್ಯಾಂಡ್‌ಗಳಿಗೆ ಸಂಬಂಧಿಸಿದಂತೆ ಘೋಷಿತ ಬೆಲೆಯನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಅಬಕಾರಿ ನೋಂದಣಿ ದಾಖಲೆಗೆ ಘೋಷಿಸತಕ್ಕದ್ದು. ಆನ್‌ಲೈನ್ ಬೆಲೆ ಘೋಷಣೆಗೆ ಸಂಬಂಧಿಸಿದ ಮಾಹಿತಿಯ ನಿಖರತೆಯನ್ನು ದೃಢೀಕರಿಸುವ ಸ್ವಯಂ ಘೋಷಣೆಯನ್ನು ಸಲ್ಲಿಸಿದ ನಂತರ**,** ಡಿಜಿಟಲ್ ವ್ಯವಸ್ಥೆಯು

ಘೋಷಿತ ಬೆಲೆಗೆ ಸಂಬಂಧಿಸಿದಂತೆ ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆಯನ್ನು ಸ್ವಯಂಚಾಲಿತವಾಗಿ ಸೃಜಿಸುತ್ತದೆ, ಇದನ್ನು ಸನ್ನದುದಾರನು, ಡಿಸ್ಟಿಲರಿ ಅಥವಾ ಬ್ರೀವರಿ ಅಥವಾ ಕ್ರಾಫ್ಟ್ ಬ್ರೀವರಿ ಅಥವಾ ವೈನರಿಯ ಉಸ್ತುವಾರಿ ಅಬಕಾರಿ ಅಧಿಕಾರಿ ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನ ಉಸ್ತುವಾರಿ ಅಬಕಾರಿ ಅಧಿಕಾರಿ ಅಥವಾ ಮಿಲಿಟರಿ ಕ್ಯಾಂಟೀನ್ ಮಳಿಗೆ ಬಂಧಪತ್ರಾಧೀನ ಉಗ್ರಾಣ ಸನ್ನದುದಾರನು, ಡಿಸ್ಟಿಲರಿ ಅಥವಾ ಬ್ರೀವರಿ ಅಥವಾ ಕ್ರಾಫ್ಟ್ ಬ್ರೀವರಿ ಅಥವಾ ವೈನರಿ ಅಥವಾ ಮಿಲಿಟರಿ ಕ್ಯಾಂಟೀನ್ ಮಳಿಗೆ ಬಂಧಪತ್ರಾಧೀನ ಉಗ್ರಾಣ ಸನ್ನದುದಾರನು ಇರುವ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಮತ್ತು ಅಬಕಾರಿ ಆಯುಕ್ತರ ಕಛೇರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ. ಸನ್ನುದಾರನು ಅಬಕಾರಿ ನೋಂದಣಿ ದಾಖಲೆಯಲ್ಲಿ ಘೋಷಿತ ಬೆಲೆಯ ತಿಳುವಳಿಕೆ ಮತ್ತು ಇಂಡೀಕರಣ ಮಾಡತಕ್ಕದ್ದು. ಘೋಷಿತ ಬೆಲೆಯು ಅಬಕಾರಿ ನೋಂದಣಿ ದಾಖಲೆಯಲ್ಲಿ ತಿಳುವಳಿಕೆ ನೀಡಿದ ಮರುದಿನದಿಂದ ಸ್ವಯಂಚಾಲಿತವಾಗಿ ಜಾರಿಗೆ ಬರುತ್ತದೆ".

**(ii)** ಉಪ-ನಿಯಮ (**2**) ರ ಬದಲಾಗಿ ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

"(2) ಉಪ-ನಿಯಮ(1) ರ ಅಡಿಯಲ್ಲಿ ಬೆಲೆ ಘೋಷಣೆ ಮಾಡಿದ ನಂತರ ಡಿಸ್ಟಿಲರಿ, ಬ್ರೀವರಿ, ಕ್ರಾಫ್ಟ್ ಬ್ರೀವರಿ, ವೈನರಿ ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನು ಅಥವಾ ಮಿಲಿಟರಿ ಕ್ಯಾಂಟೀನ್ ಮಳಿಗೆ ಬಂಧಪತ್ರಾಧೀನ ಉಗ್ರಾಣ ಸನ್ನದನ್ನು ಹೊಂದಿರುವ ಸನ್ನದುದಾರನು, ಸಂದರ್ಭಾನುಸಾರ, ಘೋಷಿತ ಬೆಲೆಯಲ್ಲಿ ಯಾವುದೇ ಪರಿಷ್ಕರಣೆ ಮಾಡಲು ಬಯಸಿದಲ್ಲಿ, ಸನ್ನದುದಾರನು ಅಬಕಾರಿ ಸುಂಕ ಅಥವಾ ಪ್ರತಿ ಸುಂಕ ಮತ್ತು ಹೆಚ್ಚುವರಿ ಅಬಕಾರಿ ಸುಂಕ ಅಥವಾ ಹೆಚ್ಚುವರಿ ಪ್ರತಿ ಸುಂಕವನ್ನು, ಭಾರತದ ಹೊರಗಿನಿಂದ ಆಮದು ಮಾಡಿಕೊಳ್ಳುವ ಮದ್ಯದ ಮೇಲೆ ವಿಶೇಷ ಶುಲ್ಕ ವಿಧಿಸುವ ಉದ್ದೇಶಕ್ಕಾಗಿ, ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ ಡಿಆರ್‌ಪಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಮಾರಾಟ ಮಾಡಲು ಅಥವಾ ಕರ್ನಾಟಕ ರಾಜ್ಯದ ಹೊರಗೆ ಆದರೆ ಭಾರತದ ಒಳಗೆ ರಫ್ತು ಮಾಡಲು ಉದ್ದೇಶಿಸಲಾದ ಮದ್ಯದ ಬ್ರ್ಯಾಂಡ್‌ಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ಘೋಷಿತ ಬೆಲೆಯನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಅಬಕಾರಿ ನೋಂದಣಿ ದಾಖಲೆಗೆ ಘೋಷಿಸತಕ್ಕದ್ದು .ಆನ್ ಲೈನ್ ಪರಿಷ್ಕೃತ ಬೆಲೆ ಘೋಷಣೆಗೆ ಸಂಬಂಧಿಸಿದ ಮಾಹಿತಿಯ ನಿಖರತೆಯನ್ನು ದೃಢೀಕರಿಸುವ ಸ್ವಯಂ ಘೋಷಣೆಯನ್ನು ಸಲ್ಲಿಸಿದ ನಂತರ, ಡಿಜಿಟಲ್ ವ್ಯವಸ್ಥೆಯು ಪರಿಷ್ಕೃತ ಘೋಷಿತ ಬೆಲೆಗೆ ಸಂಬಂಧಿಸಿದಂತೆ ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆಯನ್ನು ಸ್ವಯಂಚಾಲಿತವಾಗಿ ಸೃಜಿಸುತ್ತದೆ, ಇದನ್ನು ಸನ್ನದುದಾರನು, ಡಿಸ್ಟಿಲರಿ ಅಥವಾ ಬ್ರೀವರಿ ಅಥವಾ ಕ್ರಾಫ್ಟ್ ಬ್ರೀವರಿ ಅಥವಾ ವೈನರಿಯ ಉಸ್ತುವಾರಿ ಅಬಕಾರಿ ಅಧಿಕಾರಿ ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನ ಉಸ್ತುವಾರಿ ಅಬಕಾರಿ ಅಧಿಕಾರಿ ಅಥವಾ ಮಿಲಿಟರಿ ಕ್ಯಾಂಟೀನ್ ಮಳಿಗೆ ಬಂಧಪತ್ರಾಧೀನ ಉಗ್ರಾಣ ಸನ್ನದುದಾರನು, ಡಿಸ್ಟಿಲರಿ ಅಥವಾ ಬ್ರೀವರಿ ಅಥವಾ ಕ್ರಾಫ್ಟ್ ಬ್ರೀವರಿ ಅಥವಾ ವೈನರಿ ಅಥವಾ ಮಿಲಿಟರಿ ಕ್ಯಾಂಟೀನ್ ಮಳಿಗೆ ಬಂಧಪತ್ರಾಧೀನ ಉಗ್ರಾಣ ಸನ್ನದುದಾರನು ಇರುವ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಮತ್ತು ಅಬಕಾರಿ ಆಯುಕ್ತರ ಕಛೇರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ. ಸನ್ನುದಾರನು ಅಬಕಾರಿ ನೋಂದಣಿ ದಾಖಲೆಯಲ್ಲಿ ಪರಿಷ್ಕೃತ ಘೋಷಿತ ಬೆಲೆಯ ತಿಳುವಳಿಕೆ ಮತ್ತು ಇಂಡೀಕರಣ ಮಾಡತಕ್ಕದ್ದು.

ಪರಿಷ್ಕೃತ ಘೋಷಿತ ಬೆಲೆಯು ಅಬಕಾರಿ ನೋಂದಣಿ ದಾಖಲೆಯಲ್ಲಿ ತಿಳುವಳಿಕೆ ನೀಡಿದ ಮರುದಿನದಿಂದ ಸ್ವಯಂಚಾಲಿತವಾಗಿ ಜಾರಿಗೆ ಬರುತ್ತದೆ”.

**(iii)** ಉಪ-ನಿಯಮ (3) ರಲ್ಲಿ, ವಿವರಣೆಯ ಮೊದಲು ಅಸ್ತಿತ್ವದಲ್ಲಿರುವ ಉಪಬಂಧದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

**“(3)** ಯಾವುದೇ ಡಿಸ್ಟಿಲರಿ, ಬ್ರೀವರಿ, ಕ್ರಾಫ್ಟ್ ಬ್ರೀವರಿ, ವೈನರಿ ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನು ಅಥವಾ ಮಿಲಿಟರಿ ಕ್ಯಾಂಟೀನ್ ಮಳಿಗೆ ಬಂಧಪತ್ರಾಧೀನ ಉಗ್ರಾಣ ಸನ್ನದನ್ನು ಹೊಂದಿರುವ ಸನ್ನದುದಾರನು, ಅಬಕಾರಿ ಇಲಾಖೆಯ ನೋಂದಣಿ ದಾಖಲೆಗಳಲ್ಲಿ ತಿಳಿವಳಿಕೆ ನೀಡದ ಮತ್ತು ಇಂಡೀಕರಿಸದ ಬ್ರಾಂಡ್ ಲೇಬಲ್ ಅನ್ನು ಹಾಗೂ ಸನ್ನದುದಾರನು ಅದರ ಬೆಲೆಯನ್ನು ಆನ್‌ಲೈನ್‌ನಲ್ಲಿ ಘೋಷಿಸದ ಮತ್ತು ಅಬಕಾರಿ ನೋಂದಣಿ ದಾಖಲೆಯಲ್ಲಿ ಅಂಗೀಕರಿಸದ ಯಾವುದೇ ಮದ್ಯವನ್ನು ಕರ್ನಾಟಕ ರಾಜ್ಯದಲ್ಲಿ ಮಾರಾಟ ಮಾಡಲು ಅಥವಾ ಕರ್ನಾಟಕ ರಾಜ್ಯದ ಹೊರಗೆ ಆದರೆ ಭಾರತದ ಒಳಗೆ ರಫ್ತು ಮಾಡತಕ್ಕದ್ದಲ್ಲ”.

**4. <u>2-ಎಎಫ್ ನೇ ನಿಯಮದ ತಿದ್ದುಪಡಿ</u>:–** ಸದರಿ ನಿಯಮಗಳ ನಿಯಮ 2-ಎಎಫ್ ರಲ್ಲಿ:-

**(i) ಉಪ-ನಿಯಮ (1) ರಲ್ಲಿ, ವಿವರಣೆಯ ಮೊದಲು ಅಸ್ತಿತ್ವದಲ್ಲಿರುವ ಉಪಬಂಧದ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-**

**“2-ಎಎಫ್. ಗರಿಷ್ಠ ಚಿಲ್ಲರೆ ಮಾರಾಟ ಬೆಲೆಯ ಘೋಷಣೆ**:- (1) ಡಿಸ್ಟಿಲರಿ ಸನ್ನದುದಾರನು ಅಥವಾ ಬ್ರೀವರಿ ಸನ್ನದುದಾರನು ಅಥವಾ ಕ್ರಾಫ್ಟ್ ಬ್ರೀವರಿ ಸನ್ನದುದಾರನು ಅಥವಾ ವೈನರಿ ಸನ್ನದುದಾರನು ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನು, ಸಂದರ್ಭಾನುಸಾರ, ಕರ್ನಾಟಕ ಅಬಕಾರಿ )ಬಾಟ್ಲಿಂಗ್ ಆಫ್ ಲಿಕ್ಕರ್( ನಿಯಮಗಳು, 1967 ರ ಅಡಿ ಕರ್ನಾಟಕ ರಾಜ್ಯದಲ್ಲಿ ಮಾರಾಟ ಮಾಡಲಿರುವ ಮದ್ಯದ ಬ್ರಾಂಡ್ ಗಳ ಲೇಬಲ್ ಗಳನ್ನು  ಅಬಕಾರಿ ಇಲಾಖೆಯ ನೋಂದಣಿ ದಾಖಲೆಗಳಲ್ಲಿ ತಿಳಿವಳಿಕೆ ನೀಡಿದ ಮತ್ತು ಇಂಡೀಕರಿಸಿದ ನಂತರ ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ ಎಂಆರ್‌ಪಿಯಲ್ಲಿ ಪ್ರತಿ ಮದ್ಯದ ಬ್ರ್ಯಾಂಡ್‌ನ ಗರಿಷ್ಠ ಚಿಲ್ಲರೆ ಮಾರಾಟ ಬೆಲೆಯ ಬೆಲೆಯನ್ನು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಅಬಕಾರಿ ನೋಂದಣಿ ದಾಖಲೆಗೆ ಘೋಷಿಸತಕ್ಕದ್ದು .ಆನ್ ಲೈನ್ ಗರಿಷ್ಠ ಚಿಲ್ಲರೆ ಮಾರಾಟ ಬೆಲೆಯ ಘೋಷಣೆಗೆ ಸಂಬಂಧಿಸಿದ ಮಾಹಿತಿಯ ನಿಖರತೆಯನ್ನು ದೃಢೀಕರಿಸುವ ಸ್ವಯಂ ಘೋಷಣೆಯನ್ನು ಸಲ್ಲಿಸಿದ ನಂತರ, ಡಿಜಿಟಲ್ ವ್ಯವಸ್ಥೆಯು ಗರಿಷ್ಠ ಚಿಲ್ಲರೆ ಮಾರಾಟ ಬೆಲೆಗೆ ಸಂಬಂಧಿಸಿದಂತೆ ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆಯನ್ನು ಸ್ವಯಂಚಾಲಿತವಾಗಿ ಸೃಜಿಸುತ್ತದೆ, ಇದನ್ನು ಸನ್ನದುದಾರನು, ಡಿಸ್ಟಿಲರಿ ಅಥವಾ ಬ್ರೀವರಿ ಅಥವಾ ಕ್ರಾಫ್ಟ್ ಬ್ರೀವರಿ ಅಥವಾ ವೈನರಿಯ ಉಸ್ತುವಾರಿ ಅಬಕಾರಿ ಅಧಿಕಾರಿ ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನ ಉಸ್ತುವಾರಿ ಅಬಕಾರಿ ಅಧಿಕಾರಿ, ಡಿಸ್ಟಿಲರಿ ಅಥವಾ ಬ್ರೀವರಿ ಅಥವಾ ಕ್ರಾಫ್ಟ್ ಬ್ರೀವರಿ ಅಥವಾ ವೈನರಿ ಇರುವ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಮತ್ತು ಅಬಕಾರಿ ಆಯುಕ್ತರ ಕಛೇರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ.ಸನ್ನುದಾರನು ಅಬಕಾರಿ ನೋಂದಣಿ ದಾಖಲೆಯಲ್ಲಿ ಗರಿಷ್ಠ ಚಿಲ್ಲರೆ

ಮಾರಾಟ ಬೆಲೆಯ ತಿಳುವಳಿಕೆ ಮತ್ತು ಇಂಡೀಕರಣ ಮಾಡತಕ್ಕದ್ದು. ಗರಿಷ್ಠ ಚಿಲ್ಲರೆ ಮಾರಾಟ ಬೆಲೆಯು ಅಬಕಾರಿ ನೋಂದಣಿ ದಾಖಲೆಯಲ್ಲಿ ತಿಳುವಳಿಕೆ ನೀಡಿದ ಮರುದಿನದಿಂದ ಸ್ವಯಂಚಾಲಿತವಾಗಿ ಜಾರಿಗೆ ಬರುತ್ತದೆ"

**(ii)** ಉಪ-ನಿಯಮ (**2**) ರ ಬದಲಾಗಿ ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು**,** ಎಂದರೆ:-

"(2) ಉಪ-ನಿಯಮ(1) ರ ಅಡಿಯಲ್ಲಿ ಬೆಲೆ ಘೋಷಣೆ ಮಾಡಿದ ನಂತರ ಡಿಸ್ಟಿಲರಿ, ಬ್ರೀವರಿ, ಕ್ರಾಫ್ಟ್ ಬ್ರೀವರಿ, ವೈನರಿ ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನು, ಸಂದರ್ಭಾನುಸಾರ, ಘೋಷಿತ ಬೆಲೆಯಲ್ಲಿ ಯಾವುದೇ ಪರಿಷ್ಕರಣೆ ಮಾಡಲು ಬಯಸಿದಲ್ಲಿ, ಸನ್ನದುದಾರನು ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ ಆರ್ ಎಂಆರ್‌ಪಿಯಲ್ಲಿ ಪರಿಷ್ಕೃತ ಗರಿಷ್ಠ ಚಿಲ್ಲರೆ ಮಾರಾಟ ಬೆಲೆಯನ್ನು ಮರು-ದಾಖಲಿಸುವಿಕೆಗಾಗಿ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಅಬಕಾರಿ ನೋಂದಣಿ ದಾಖಲೆಗೆ ಘೋಷಿಸತಕ್ಕದ್ದು .ಆನ್‌ಲೈನ್ ಪರಿಷ್ಕೃತ ಗರಿಷ್ಠ ಚಿಲ್ಲರೆ ಮಾರಾಟ ಬೆಲೆ ಘೋಷಣೆಗೆ ಸಂಬಂಧಿಸಿದ ಮಾಹಿತಿಯ ನಿಖರತೆಯನ್ನು ದೃಢೀಕರಿಸುವ ಸ್ವಯಂ ಘೋಷಣೆಯನ್ನು ಸಲ್ಲಿಸಿದ ನಂತರ, ಡಿಜಿಟಲ್ ವ್ಯವಸ್ಥೆಯು ಪರಿಷ್ಕೃತ ಗರಿಷ್ಠ ಚಿಲ್ಲರೆ ಮಾರಾಟ ಬೆಲೆಗೆ ಸಂಬಂಧಿಸಿದಂತೆ ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆಯನ್ನು ಸ್ವಯಂಚಾಲಿತವಾಗಿ ಸೃಜಿಸುತ್ತದೆ, ಇದನ್ನು ಸನ್ನದುದಾರನು, ಡಿಸ್ಟಿಲರಿ ಅಥವಾ ಬ್ರೀವರಿ ಅಥವಾ ಕ್ರಾಫ್ಟ್ ಬ್ರೀವರಿ ಅಥವಾ ವೈನರಿಯ ಉಸ್ತುವಾರಿ ಅಬಕಾರಿ ಅಧಿಕಾರಿ ಅಥವಾ ಡಿಸ್ಟ್ರಿಬ್ಯೂಟರ್ ಸನ್ನದುದಾರನ ಉಸ್ತುವಾರಿ ಅಬಕಾರಿ ಅಧಿಕಾರಿ, ಡಿಸ್ಟಿಲರಿ ಅಥವಾ ಬ್ರೀವರಿ ಅಥವಾ ಕ್ರಾಫ್ಟ್ ಬ್ರೀವರಿ ಅಥವಾ ವೈನರಿ ಇರುವ ಜಿಲ್ಲೆಯ ಅಬಕಾರಿ ಉಪ ಆಯುಕ್ತರು ಮತ್ತು ಅಬಕಾರಿ ಆಯುಕ್ತರ ಕಛೇರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ. ಸನ್ನುದಾರನು ಅಬಕಾರಿ ನೋಂದಣಿ ದಾಖಲೆಯಲ್ಲಿ ಪರಿಷ್ಕೃತ ಗರಿಷ್ಠ ಚಿಲ್ಲರೆ ಮಾರಾಟ ಬೆಲೆಯ ತಿಳುವಳಿಕೆ ಮತ್ತು ಇಂಡೀಕರಣ ಮಾಡತಕ್ಕದ್ದು. ಪರಿಷ್ಕೃತ ಗರಿಷ್ಠ ಚಿಲ್ಲರೆ ಮಾರಾಟ ಬೆಲೆಯು ಅಬಕಾರಿ ನೋಂದಣಿ ದಾಖಲೆಯಲ್ಲಿ ತಿಳುವಳಿಕೆ ನೀಡಿದ ಮರುದಿನದಿಂದ ಸ್ವಯಂಚಾಲಿತವಾಗಿ ಜಾರಿಗೆ ಬರುತ್ತದೆ"

5. <u>ನಮೂನೆ ಡಿಪಿ ಯ ತಿದ್ದುಪಡಿ</u>**:–** ಸದರಿ ನಿಯಮಗಳ ನಮೂನೆ ಡಿಪಿಯಲ್ಲಿ:-

(i) **ಕ್ರಮ ಸಂಖ್ಯೆ 3 ರ ಶೀರ್ಷಿಕೆ.** ಕರ್ನಾಟಕದ ಹೊರಗೆ ರಫ್ತು ಮಾಡಲು ನೀಡಲಾದ ಮದ್ಯ ಮತ್ತು ಅವುಗಳಿಗೆ ಸಂಬಂಧಿಸಿದ ನಮೂದುಗಳ ತರುವಾಯ, **"**ಮೇಲಿನ ದರಗಳು......... ರಿಂದ ಜಾರಿಗೆ ಬರುತ್ತವೆ**"** ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) "**ಕಛೇರಿ ಬಳಕೆಗೆ ಮಾತ್ರ**" ಎಂಬ ಶೀರ್ಷಿಕೆ ಮತ್ತು ಅವುಗಳಿಗೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

**"ಸ್ವೀಕೃತಿ**

ಅರ್ಜಿ ಸಂಖ್ಯೆ: ದಿನಾಂಕ:

ನೀವು ಘೋಷಿಸಿದ ಮೇಲಿನ ಬೆಲೆ/ಬೆಲೆಗಳನ್ನು ಅಬಕಾರಿ ನೋಂದಣಿ ದಾಖಲೆಯಲ್ಲಿ ದಾಖಲಿಸಲಾಗಿದೆ, ಅದು ಈ ದಿನಾಂಕದಿಂದ ಜಾರಿಗೆ ಬರುತ್ತದೆ ..............

ಅಬಕಾರಿ ನೋಂದಣಿ ದಾಖಲೆ,
ಅಬಕಾರಿ ಇಲಾಖೆ,
ಕರ್ನಾಟಕ ಸರ್ಕಾರ**".**

**6.** ನಮೂನೆ ಡಿಆರ್‌ಪಿ ಯ ತಿದ್ದುಪಡಿ:– ಸದರಿ ನಿಯಮಗಳ ನಮೂನೆ ಡಿಆರ್‌ಪಿಯಲ್ಲಿ:-

(i) **ಕ್ರಮ ಸಂಖ್ಯೆ 3 ರ ಶೀರ್ಷಿಕೆ:** ಕರ್ನಾಟಕದ ಹೊರಗೆ ರಫ್ತು ಮಾಡಲು ನೀಡಲಾದ ಮದ್ಯ ಮತ್ತು ಅವುಗಳಿಗೆ ಸಂಬಂಧಿಸಿದ ನಮೂದುಗಳ ತರುವಾಯ, **"ನಾನು/ನಾವು ಈ ಪರಿಷ್ಕೃತ ದರಗಳನ್ನು** ......... ರಿಂದ ಜಾರಿಗೆ ತರಲು ಉದ್ದೇಶಿಸಿದ್ದೇವೆ**"** ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) "**ಕಛೇರಿ ಬಳಕೆಗೆ ಮಾತ್ರ**" ಎಂಬ ಶೀರ್ಷಿಕೆ ಮತ್ತು ಅವುಗಳಿಗೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

**"ಸ್ವೀಕೃತಿ**

ಅರ್ಜಿ ಸಂಖ್ಯೆ: ದಿನಾಂಕ:

ನೀವು ಘೋಷಿಸಿದ ಮೇಲಿನ ಪರಿಷ್ಕೃತ ಬೆಲೆ/ಬೆಲೆಗಳನ್ನು ಅಬಕಾರಿ ನೋಂದಣಿ ದಾಖಲೆಯಲ್ಲಿ ದಾಖಲಿಸಲಾಗಿದೆ, ಅದು ಈ ದಿನಾಂಕದಿಂದ ಜಾರಿಗೆ ಬರುತ್ತದೆ ..............

ಅಬಕಾರಿ ನೋಂದಣಿ ದಾಖಲೆ,
ಅಬಕಾರಿ ಇಲಾಖೆ,
ಕರ್ನಾಟಕ ಸರ್ಕಾರ**".**

**7.** ನಮೂನೆ ಎಂಆರ್‌ಪಿ ಯ ತಿದ್ದುಪಡಿ:– ಸದರಿ ನಿಯಮಗಳ ನಮೂನೆ ಎಂಆರ್‌ಪಿಯಲ್ಲಿ:-

(i) "**ಮೇಲಿನ ದರಗಳು......... ರಿಂದ ಜಾರಿಗೆ ಬರುತ್ತವೆ**" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) "**ಕಛೇರಿ ಬಳಕೆಗೆ ಮಾತ್ರ**" ಎಂಬ ಶೀರ್ಷಿಕೆ ಮತ್ತು ಅವುಗಳಿಗೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

**"ಸ್ವೀಕೃತಿ**

ಅರ್ಜಿ ಸಂಖ್ಯೆ: ದಿನಾಂಕ:

ನೀವು ಘೋಷಿಸಿದ ಮೇಲಿನ ಗರಿಷ್ಠ ಚಿಲ್ಲರೆ ಮಾರಾಟ ಬೆಲೆ/ಬೆಲೆಗಳನ್ನು ಅಬಕಾರಿ ನೋಂದಣಿ ದಾಖಲೆಯಲ್ಲಿ ದಾಖಲಿಸಲಾಗಿದೆ, ಅದು ಈ ದಿನಾಂಕದಿಂದ ಜಾರಿಗೆ ಬರುತ್ತದೆ .............

ಅಬಕಾರಿ ನೋಂದಣಿ ದಾಖಲೆ,
ಅಬಕಾರಿ ಇಲಾಖೆ,
ಕರ್ನಾಟಕ ಸರ್ಕಾರ**"**.

**8.** <u>**ನಮೂನೆ ಆರ್‌ಎಂಆರ್‌ಪಿ ಯ ತಿದ್ದುಪಡಿ**</u>:- ಸದರಿ ನಿಯಮಗಳ ನಮೂನೆ ಆರ್‌ಎಂಆರ್‌ಪಿಯಲ್ಲಿ:-

(i) "**ಮೇಲಿನ ದರಗಳು......... ರಿಂದ ಜಾರಿಗೆ ಬರುತ್ತವೆ**" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) **"ಕಛೇರಿ ಬಳಕೆಗೆ ಮಾತ್ರ**" ಎಂಬ ಶೀರ್ಷಿಕೆ ಮತ್ತು ಅವುಗಳಿಗೆ ಸಂಬಂಧಿಸಿದ ನಮೂದುಗಳಿಗೆ ಬದಲಾಗಿ, ಈ ಮುಂದಿನದನ್ನು ಪ್ರತಿಸ್ಥಾಪಿಸತಕ್ಕದ್ದು, ಎಂದರೆ:-

**"ಸ್ವೀಕೃತಿ**

ಅರ್ಜಿ ಸಂಖ್ಯೆ ದಿನಾಂಕ:

ನೀವು ಘೋಷಿಸಿದ ಮೇಲಿನ ಪರಿಷ್ಕೃತ ಗರಿಷ್ಠ ಚಿಲ್ಲರೆ ಮಾರಾಟ ಬೆಲೆ/ಬೆಲೆಗಳನ್ನು ಅಬಕಾರಿ ನೋಂದಣಿ ದಾಖಲೆಯಲ್ಲಿ ದಾಖಲಿಸಲಾಗಿದೆ, ಅದು ಈ ದಿನಾಂಕದಿಂದ ಜಾರಿಗೆ ಬರುತ್ತದೆ .............

ಅಬಕಾರಿ ನೋಂದಣಿ ದಾಖಲೆ,
ಅಬಕಾರಿ ಇಲಾಖೆ,
ಕರ್ನಾಟಕ ಸರ್ಕಾರ**"**.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಭೀಮಪ್ಪ ಪ ಅಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಅಬಕಾರಿ)

# GOVERNMENT OF KARNATAKA

No. FD 15 PES 2025

Karnataka Government Secretariat
Vidhana Soudha,
Dr. B.R. Ambedkar Veedhi,
Bengaluru, Dated:08.05.2026.

## NOTIFICATION

Whereas the draft of the following rules further to amend the Karnataka Excise (Excise Duties and Fees) Rules, 1968, was published as required by sub-section (1) of Section 71 of the Karnataka Excise Act, 1965 (Karnataka Act 21 of 1966) in Notification No: FD 15 PES 2026, dated: 29-04-2026 in Part-IVA of the Karnataka Gazette (Extraordinary) No.343 dated: 29-04-2026 inviting objections and suggestions from all persons likely to be affected within Seven days from the date of its publication in the official Gazette.

And, whereas the said Gazette was made available to the public on 29th April, 2026.

And, whereas no objections and suggestions were received in respect of the said draft by the State Government.

Now, therefore, in exercise of the powers conferred by Section 71 of the Karnataka Excise Act, 1965 (Karnataka Act 21 of 1966), the Government of Karnataka hereby makes the following rules, namely:-

## RULES

**1**. **Title and commencement**:- (1) These rules may be called the Karnataka Excise (Excise Duties and Fees) (Amendment) Rules, 2026.

(2) They shall come into force with effect from the date of their final publication in the official Gazette.

**2**. **Amendment of Rule 1-A**:– In the Karnataka Excise (Excise Duties and Fees) Rules, 1968 (hereinafter referred to as the 'said rules'), in Rule 1-A, after clause (c), the following clause shall be inserted, namely:-

**“(aa) “Excise Registry”** means an Electronic Database maintained by the Excise Department for the purpose of implementing provisions of the Karnataka Excise Act, 1965 and the Rules and the Notifications, Orders or Circulars made thereunder from time to time**”.**

3.**<u>Amendment of Rule 2-AE</u>**:– In the said Rules, in Rule 2-AE:-

**(i)** for sub-rule (1), the following shall be substituted, namely:-

**“2-AE. Declaration of Price:-** (1) The Distillery licensee or the Brewery licensee or the Craft Brewery licensee or the Winery licensee or a Distributor licensee or a licensee holding Military Canteen Stores Bonded Warehouse licence, as the case may be, shall declare to the Excise Registry through Electronic mode in Form DP appended to these Rules, the Declared Price in respect of the brands of Liquor meant for sale in Karnataka or for export outside Karnataka but within India for recording such price for the purpose of levying Excise Duty or Countervailing Duty and Additional Excise Duty or Additional Countervailing Duty, Special fee in respect of Liquor imported from outside India, as the case may be. Upon submission of self-declaration confirming the accuracy of information pertaining to the online Declaration of Price, the digital system shall auto-generate the format appended to these Rules regarding the Declared Price which shall be made available to the licensee, Excise Officer-in-charge of the Distillery or Brewery or Craft Brewery or Winery or Excise Officer-in-charge of the Distributor licensee or Military Canteen Stores Bonded Warehouse licensee, the Deputy Commissioner of Excise of the District where the Distillery or Brewery or Craft Brewery or Winery or Military Canteen Stores Bonded Warehouse licensee is situated and the Office of the Excise Commissioner. The licensee shall intimate and update the Declared Price in the Excise Registry. The Declared Price shall come into effect automatically from the following day of the intimation in the Excise Registry **”.**

**(ii)** for sub-rule (2), the following shall be substituted, namely:-

**“(2)** If after making a declaration of the price under sub-rule (1), the Distillery, Brewery, Craft Brewery, Winery or a Distributor licensee or a licensee holding Military Canteen Stores Bonded Warehouse licence, as the case may be, intends to make any revision in the Declared

Price, the licensee shall declare to the Excise Registry through Electronic mode in Form DRP appended to these Rules, the Revised Declared Price in respect of the brands of Liquor meant for sale in Karnataka or for export outside Karnataka but within India for recording such revised price for the purpose of levying Excise Duty or Countervailing Duty and Additional Excise Duty or Additional Countervailing Duty, Special fee in respect of Liquor imported from outside India, as the case may be. Upon submission of self-declaration confirming the accuracy of information pertaining to the online Declaration of Revised Price, the digital system shall auto-generate the format appended to these Rules regarding the Revised Declared Price which shall be made available to the licensee, Excise Officer-in-charge of the Distillery or Brewery or Craft Brewery or Winery or Excise Officer-in-charge of the Distributor licensee or Military Canteen Stores Bonded Warehouse licensee, the Deputy Commissioner of Excise of the District where the Distillery or Brewery or Craft Brewery or Winery or Military Canteen Stores Bonded Warehouse licensee is situated and the Office of the Excise Commissioner. The licensee shall intimate and update the Revised Declared Price in the Excise Registry. The Revised Declared Price shall come into effect automatically from the following day of the intimation in the Excise Registry **".**

**(iii)** for sub-rule (3), for the existing provision before the explanation, the following shall be substituted, namely:-

**"(3)** No liquor, the brand label of which is not intimated online and updated in the Excise Registry and the price thereon is not declared online by the licensee and acknowledged by the Excise Registry shall be issued for sale in Karnataka or exported outside Karnataka but within India by any Distillery, Brewery, Craft Brewery, Winery or a Distributor licensee or a licensee holding Military Canteen Stores Bonded Warehouse licence**".**

**4**. **<u>Amendment of Rule 2-AF</u>**:– In Rule 2-AF of the said Rules:-

**(i)** for sub-rule (1), for the existing provision before the explanation, the following shall be substituted, namely:

**"2-AF. Declaration of Maximum Retail Selling Price:-** (1) The Distillery licensee or the Brewery licensee or the Craft Brewery licensee or the Winery licensee or a Distributor licensee, as the case may be, shall declare to the Excise Registry through Electronic mode in Form MRP appended to these Rules, the Maximum Retail Selling Price in respect of each

brand of Liquor for the purpose of recording such price after the labels of such brands of liquor meant for sale in Karnataka are intimated online and updated in the Excise Registry under the Karnataka Excise (Bottling of Liquor) Rules, 1967. Upon submission of self-declaration confirming the accuracy of information pertaining to the online Declaration of Maximum Retail Selling Price, the digital system shall auto-generate the format appended to these Rules regarding the Maximum Retail Selling Price which shall be made available to the licensee, Excise Officer-in-charge of the Distillery or Brewery or Craft Brewery or Winery or Excise Officer-in-charge of the Distributor licensee, the Deputy Commissioner of Excise of the District where the Distillery or Brewery or Craft Brewery or Winery is situated and the Office of the Excise Commissioner. The licensee shall intimate and update the Revised Maximum Retail Selling Price in the Excise Registry. The Maximum Retail Selling Price shall come into effect automatically from the following day of the intimation in the Excise Registry **".**

**(ii)** for sub-rule (2), the following shall be substituted, namely:-

**"(2)** If after making a declaration under sub-rule (1), the Distillery, Brewery, Craft Brewery, Winery or a Distributor licensee, as the case may be, intends to make any revision in the Price so declared, the licensee shall declare to the Excise Registry through Electronic mode in Form RMRP appended to these Rules, the Revised Maximum Retail Selling Price for re-recording. Upon submission of self-declaration confirming the accuracy of information pertaining to the online submission of Revised Maximum Retail Selling Price, the digital system shall auto-generate the format appended to these Rules regarding the Revised Maximum Retail Selling Price which shall be made available to the licensee, Excise Officer-in-charge of the Distillery or Brewery or Craft Brewery or Winery or Excise Officer-in-charge of the Distributor licensee, the Deputy Commissioner of Excise of the District where the Distillery or Brewery or Craft Brewery or Winery is situated and the O/o the Excise Commissioner. The licensee shall intimate and update the Revised Maximum Retail Selling Price in the Excise Registry. The Revised Maximum Retail Selling Price shall come into effect automatically from the following day of the intimation in the Excise Registry **".**

5. **Amendment of Form DP** – In the said Rules in Form DP:-

i. Under the heading Sl.No.3. Liquor issued for export outside Karnataka and the entries relating thereto, the words “The above rates will come into effect from…..” shall be omitted.

ii. For the heading “For Office use only” and the entries relating thereto, the following shall be substituted, namely:-

**“Acknowledgement**

Application No: Date:

The above price/prices declared by you is/are recorded in the Excise Registry which shall come into effect from ……...

Excise Registry,
Department of Excise,
Government of Karnataka**”.**

6. **Amendment of Form DRP** – In the said Rules Form DRP:-

(i) In the heading Sl.No.3. Liquor issued for export outside Karnataka and the entries relating thereto, the words “I/We intend to give effect to this revised rates from…..” shall be omitted.

(ii) For the heading “For Office use only” and the entries relating thereto, the following shall be substituted, namely:-

**“Acknowledgement**

Application No: Date:

The above revised price/prices declared by you is/are recorded in the Excise Registry which shall come into effect from ………..

Excise Registry,
Department of Excise,
Government of Karnataka**”.**

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



7. **Amendment of Form MRP** – In the said Rules in Form MRP:

(i) In the words "The above rates will come into effect from….." shall be omitted.

(ii) For the heading "For Office use only" and the entries relating thereto, the following shall be substituted, namely:-

**"Acknowledgement**

Application No: Date:

The above Maximum Retail Price/Prices declared by you is/are recorded in the Excise Registry which shall come into effect from …………

Excise Registry,
Department of Excise,
Government of Karnataka**".**

8. **Amendment of Form RMRP** – In the said Rules in Form RMRP:-

i. the words "The above rates will come into effect from….." shall be omitted.
ii. For the heading "For Office use only" and the entries relating thereto, the following shall be substituted, namely:-

**"Acknowledgement**

Application No: Date:

The above Revised Maximum Retail Price/Prices declared by you is/are recorded in the Excise Registry which shall come into effect from ……..

Excise Registry,
Department of Excise,
Government of Karnataka**".**

**By Order and in the Name of**
**The Governor of Karnataka**

**(BHIMAPPA.P. AJOOR)**

**Under Secretary to Government,**
**Finance Department (Excise)**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH